ನನ್ನೆದುರು ಜ್ಞಾನದ ಅಧಿದೇವತೆ' ಎಂಬ ಭಾವ ಅವರಲ್ಲಿ ಮೂಡುತ್ತದೆ. ಅನಂತರ ಬ್ಯಾಪಾರಿ ಬರೆದ ಲೇಖನ 'ಬಾರ್ತಿಕಾ' ಪತ್ರಿಕೆಯಲ್ಲಿ ಪ್ರಕಟವಾಗಿ ಅವರ ಹೆಸರು ಸಾಕಷ್ಟು ಪ್ರಚಲಿತವಾಗುತ್ತದೆ. 'ಜಿಜಿಬಿಶಾ' ಎಂಬ ಕಾವ್ಯನಾಮದಲ್ಲಿ ಬರೆದ ಬರಹಗಳನ್ನು ಪ್ರಸಿದ್ಧ ಪತ್ರಿಕೆಗಳು ಪ್ರಕಟಿಸುತ್ತವೆ.

ಬಹಳ ಹಿಂದೆಯೇ ಪರಿಚಯವಿದ್ದ ಅನಿತಾ ಅವರೊಂದಿಗೆ ಬ್ಯಾಪಾರಿ ಗೃಹಸ್ಥ ಜೀವನವನ್ನು ಆರಂಭಿಸುತ್ತಾರೆ. ಹಳೆಯದನ್ನು ಮರೆತು ಹೊಸ ಮನುಷ್ಯನಾಗಿ ಬಾಳಬೇಕೆಂದರೂ ಸಮಾಜ ಬಿಡುವುದಿಲ್ಲ. ಮತ್ತೆ ದಿನಗೂಲಿ, ಶಾಲೆಯೊಂದರ ಶೌಚಾಲಯವನ್ನು ಶುಚಿಗೊಳಿಸುವ ಕೆಲಸ, ಕಾಡಿನಿಂದ ಕಟ್ಟಿಗೆ ತಂದು ಹೋಟೆಲಿಗೆ ಹಾಕುವ ಕೆಲಸ. ಇವುಗಳನ್ನು ನೋಡಿ ಜನರು ಗೇಲಿ ಮಾಡುತ್ತಿದ್ದಾರೆ ಅನಿಸುತ್ತಿತ್ತು. 'ನನಗೆ ಬೇಕಾದದ್ದು ಅನ್ನವೇ ಹೊರತು ಗೌರವವಲ್ಲ' ಎಂಬ ಬ್ಯಾಪಾರಿಗೆ ಸಂಸಾರ ನಿರ್ವಹಣೆ ಮುಖ್ಯವಾಗಿತ್ತು. ಆಗ ಬ್ಯಾಪಾರಿಗೆ ನೆನಪಾದದ್ದು ಶಂಕರ್‌ಗುಹಾ ನಿಯೋಗಿ. ಆತ ಚತ್ತೀಸ್‌ಘಡ ಕೂಲಿಕಾರ್ಮಿಕರಿಗೆ ಅತಿ ಪ್ರಿಯನಾದ ವ್ಯಕ್ತಿ.

ಜನಜಾಗೃತಿಯನ್ನೇ ಮುಖ್ಯ ಉದ್ದೇಶವನ್ನಾಗಿ ಇರಿಸಿಕೊಂಡಿದ್ದ ನಿಯೋಗಿ ಅವರ ಪ್ರಭಾವಕ್ಕೆ ಒಳಗಾಗಿದ್ದ ಬ್ಯಾಪಾರಿ, ಮುಕ್ತಿಮೋರ್ಚಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿ, ಅವ್ಯವಹಾರ ನಡೆಸುತ್ತಿದ್ದ ಶ್ರೀಮಂತರ ವಿರುದ್ಧ ಬಂಡೇಳುತ್ತಾರೆ. ಸುಳ್ಳು ಆಪಾದನೆಗಳನ್ನು ಮಾಡಿ ನಿಯೋಗಿಯವರನ್ನು ದಸ್ತಗಿರಿ ಮಾಡಿ ಅನಂತರ ಬಿಡುಗಡೆ ಮಾಡಲಾಗುತ್ತದೆ. ಅವರು ತಮಗೆ ಬರುತ್ತಿರುವ ಕೊಲೆ ಬೆದರಿಕೆಯ ಬಗ್ಗೆ ರಾಷ್ಟ್ರಾಧ್ಯಕ್ಷರು ಹಾಗೂ ವಿರೋಧ ಪಕ್ಷದ ನಾಯಕ ಅದ್ವಾನಿಯವರನ್ನು ಭೇಟಿ ಮಾಡಿದರೂ ಪ್ರಯೋಜನವಾಗಲಿಲ್ಲ. ರಾತ್ರಿ ಪುಸ್ತಕವನ್ನು ಓದುತ್ತಾ ನಿದ್ದೆಗೆ ಜಾರಿದ್ದ ನಿಯೋಗಿಯವರನ್ನು ದುಷ್ಕರ್ಮಿಗಳು ಗುಂಡಿಟ್ಟು ಕೊಲ್ಲುತ್ತಾರೆ. ಅವರ ಸಾವಿನ ಅನಂತರ ಬ್ಯಾಪಾರಿ ತನ್ನದೇ ಆದ ನಿರ್ದಿಷ್ಟ ನಿಲುವುಗಳೊಂದಿಗೆ ಯಾವುದೇ ಅಳುಕಿಲ್ಲದೇ ಕಾರ್ಯನಿರ್ವಹಿಸಿದರು.

ಈ ಕಥನದಲ್ಲಿ ನಿರೂಪಿತವಾಗಿರುವ ಸಂಗತಿಗಳು ಬಹಳ ಹಿಂದಿನ ಕಾಲದ್ದೇನೂ ಅಲ್ಲ; ಈಗಿನ ಪರಿಸ್ಥಿತಿಯೂ ಹಾಗೆಯೇ ಇದೆ ಎನ್ನುವುದಕ್ಕೆ ಕೃತಿ ನೆನಪಿಸುವಂತಿದೆ. ಬ್ಯಾಪಾರಿಯವರು ರಾಜಕಾರಣದ ಭ್ರಷ್ಟ ಸ್ವರೂಪವನ್ನು ಅನಾವರಣಗೊಳಿಸುತ್ತಾ ಮಾನವೀಯ ಮೌಲ್ಯಗಳ ಕಡೆ ಗಮನಹರಿಸುತ್ತಾರೆ. ಆತ್ಮಕಥನದ ಕೊನೆಯ ಮಾತುಗಳಿವು: 'ಎಲ್ಲಾ ಯುದ್ಧಗಳು ರಣಭೂಮಿಯಲ್ಲಿ ಮಾತ್ರ ನಡೆಯುವುದಿಲ್ಲ... ಜ್ಞಾನಾರ್ಜನೆಗಾಗಿ ಪ್ರಯತ್ನಿಸಿದ ಶಂಭೂಕನನ್ನು ವಧೆ ಮಾಡಿದ್ದು ಇದೇ ನೆಲದಲ್ಲಿ. ಕ್ಷತ್ರಿಯರ ಪ್ರಪಂಚಕ್ಕೆ ಪ್ರವೇಶ ಕೊಡಲು ಯತ್ನಿಸಿದ ಏಕಲವ್ಯನ ಹೆಬ್ಬೆರಳನ್ನು ಕತ್ತರಿಸಿದ ಗುರು ದ್ರೋಣಾಚಾರ್ಯರೂ ಇದೇ ನೆಲದವರೆ. ಇಂಥ ಯುದ್ಧಗಳನ್ನು ನಾನೂ ಹೋರಾಡಿ ಗೆಲ್ಲಬೇಕು. ಒಳಗೆ ಉರಿಯುತ್ತಿರುವ ಜ್ವಾಲೆಯನ್ನು ಎರಡು ರೀತಿಯಲ್ಲಿ ಶಮನ ಮಾಡಬಹುದು. ಒಂದೋ ಉರಿಯುವ ಬೆಂಕಿಗೆ ಸೀಮೆಎಣ್ಣೆ ಸುರಿದು ಬೆಂಕಿಯನ್ನು ಇನ್ನೂ ಜಾಸ್ತಿ ಮಾಡಿ ಎಲ್ಲವನ್ನೂ ಬೂದಿ ಮಾಡುವುದು. ಇಲ್ಲವೇ ಉರಿಯುವ ಬೆಂಕಿಗೆ ನೀರು ಸುರಿದು ಬೆಂಕಿಯನ್ನು ಶಮನಗೊಳಿಸುವುದು'.

'ಚಾಂಡಾಲನೊಬ್ಬನ ಆತ್ಮವಿಮರ್ಶೆ' ಪ್ರಸ್ತುತ ಕಾಲದ ಬಹುಮುಖ್ಯ ಪ್ರಕಟಣೆಗಳಲ್ಲಿ ಒಂದಾಗಿದೆ. ಅಷ್ಟೇ ಅಲ್ಲ, ಪ್ರಜ್ಞಾವಂತ ಓದುಗ ಜನಸಮುದಾಯದಲ್ಲಿ ಸಮಕಾಲೀನ ಸಾಮಾಜಿಕ, ರಾಜಕೀಯ ಹೊಣೆಗಾರಿಕೆ ಮತ್ತು ಎಚ್ಚರವನ್ನು ಮೂಡಿಸುವ ಕೃತಿ ಎನಿಸುತ್ತದೆ. ಇದು ಕನ್ನಡಕ್ಕೆ ಅನುವಾದಗೊಂಡ ಆತ್ಮಕಥನಗಳ ಸಾಲಿನಲ್ಲಿ ಭಿನ್ನವಾಗಿ ನಿಲ್ಲುತ್ತದೆ. ಅನುವಾದ ಸರಳವಾಗಿದೆ, ಸೊಗಸಾಗಿದೆ. ಬ್ಯಾಪಾರಿಯವರೇ ಕನ್ನಡದಲ್ಲಿ ಬರೆದಿರಬಹುದು ಎನ್ನುವಷ್ಟರ ಮಟ್ಟಿನ ಸಹಜ ಶೈಲಿಯಿಂದಾಗಿ ಸೃಜನಶೀಲ ಕೃತಿಯೊಂದನ್ನು ಓದಿದ ಅನುಭವವಾಗುತ್ತದೆ. ಯಾವುದನ್ನೂ ಸುತ್ತಿಬಳಸಿ ಹೇಳದ ಬ್ಯಾಪಾರಿಯವರ ನೇರ ನಿರೂಪಣೆಯನ್ನು ಅತ್ಯಂತ ಆಪ್ತವಾಗಿ ಕನ್ನಡಕ್ಕೆ ಒಗ್ಗಿಸಲಾಗಿದೆ. ಈಗಾಗಲೇ, 'ಎಲ್ಲೆ ಮೀರಿ' (ಕೀನ್ಯಾದ ಚಿಂತಕ ಗೂಗಿ ವಾಥಿಯಾಂಗೋ ಅವರ ಲೇಖನಗಳು) ಹಾಗೂ 'ಭಾಮಾ: ದಲಿತ ಪ್ರಜ್ಞೆ' ಕೃತಿಗಳನ್ನು ಕನ್ನಡಕ್ಕೆ ತಂದಿರುವ ಎಚ್.ಎಸ್. ನಾಗಭೂಷಣ ಈಗ ಬ್ಯಾಪಾರಿ ಕೃತಿಯ ಮೂಲಕ ಕನ್ನಡಿಗರಿಗೆ ಮತ್ತೊಂದು ಮಹತ್ವದ ಕೃತಿಯನ್ನು ಪರಿಚಯಿಸಿದ್ದಾರೆ. ●